4. ಸ್ಥಳೀಯ ನಾಗರೀಕರ ಮಹಜರೊಂದಿಗೆ ಕೊಳವೆ ಬಾವಿಗಳನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಿದ ವರದಿ.

5. ಚೆಕ್‌ಲಿಸ್ಟ್/ಮುಕ್ತಾಯ ವರದಿ.

6. ಸಹಾಯಕ ಕಾರ್ಯಪಾಲಕ ಅಭಿಯಂತರರ ಅಳತೆಗಳ ಪರಿಶೀಲನಾ ವರದಿ.

ಊ) 2014ನೇ ಡಿಸೆಂಬರ್ ಅಂತ್ಯದವರೆಗೆ ಕೊರೆಯಲಾಗಿರುವ ಕೊಳವೆ ಬಾವಿಗಳ ಬಾಬ್ತು ಯಾವುದೇ ಬಿಲ್ಲು ಪಾವತಿಗಾಗಿ ಬಾಕಿಯಿರುವುದಿಲ್ಲ.

ಗಡಿಭಾಗದ ರಸ್ತೆಗಳ ಅಭಿವೃದ್ಧಿ

283(244); ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ)

ಅ) ಬಂಗಾರಪೇಟೆ ತಾಲ್ಲೂಕು ತಮಿಳುನಾಡು ಹಾಗೂ ಆಂಧ್ರಪ್ರದೇಶದ ಗಡಿ ಭಾಗದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಈ ಗಡಿ ಭಾಗದ ರಸ್ತೆಗಳ ಅಭಿವೃದ್ಧಿಗಾಗಿ ಸರ್ಕಾರ ವಿಶೇಷ ಅನುದಾನ ನೀಡಿದೆಯೇ;

ಇ) ಹಾಗಿದ್ದಲ್ಲಿ 2012–13, 2013–14 ಮತ್ತು 2014–15ನೇ ಸಾಲಿಗೆ ಯಾವ ಲೆಕ್ಕ ಶೀರ್ಷಿಕೆಗಳಲ್ಲಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ. (ಲೆಕ್ಕಶೀರ್ಷಿಕೆವಾರು ವಿವರ ನೀಡುವುದು);

ಈ) ಬಿಡುಗಡೆ ಮಾಡದಿದ್ದರೆ ಗಡಿ ಭಾಗದ ಗ್ರಾಮಾಂತರ ಪ್ರದೇಶಗಳ ರಸ್ತೆಗಳ ಅಭಿವೃದ್ಧಿಗಾಗಿ ವಿಶೇಷ ಅನುದಾನ ಬಿಡುಗಡೆ ಮಾಡದಿರಲು ಕಾರಣವೇನು?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) **ಮತ್ತು** ಇ) ಪ್ರತಿವರ್ಷ ಗ್ರಾಮೀಣ ರಸ್ತೆ ನಿರ್ವಹಣೆ/ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮ/ಲೆಕ್ಕ ಶೀರ್ಷಿಕೆಯಡಿ ಜಿಲ್ಲಾ ಪಂಚಾಯತಿಗೆ ಅನುದಾನ ಒದಗಿಸಲಾಗುತ್ತಿದೆ. ವಿವರ ಈ ಕೆಳಕಂಡಂತಿದೆ.

ಕ್ರ ಸಂ	ಯೋಜನೆ ಹೆಸರು	ಬಿಡುಗಡೆಯಾದ ಅನುದಾನ ರೂ. ಲಕ್ಷಗಳಲ್ಲಿ			ಒಟ್ಟು ಬಿಡುಗಡೆಯಾದ ಅನುದಾನ
		2012–13	2013–14	2014–15	
1	3054 ಸಿಎಂಜಿಎಸ್‌ವೈ	36 24	46.77	34.76	117.77
2	13ನೇ ಹಣಕಾಸು ಆಯೋಗ ಯೋಜನೆ	55.01	68 11	74.31	197.43
3	ನಬಾರ್ಡ್	264.78	42 39	0	307.17
4	3054 ಸಿಎಂಜಿಎಸ್‌ವೈ ಯೋಜನೇತರ	0	64 28	38.46	102.74
5	ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–1 & 2	600 83	936 17	269.78	1806.78
6	ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ–2	0 00	0 00	265.32	265.32
7	5054 ಗ್ರಾಮೀಣ ರಸ್ತೆ ಅಭಿವೃದ್ಧಿ	200.00	–	–	–
	ಒಟ್ಟು	1156.86	1157.72	682.63	2797 21

ಈ) ಪ್ರತಿವರ್ಷ ಗ್ರಾಮೀಣ ರಸ್ತೆ ನಿರ್ವಹಣೆ/ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮ/ಲೆಕ್ಕ ಶೀರ್ಷಿಕೆಯಡಿ ಜಿಲ್ಲಾ ಪಂಚಾಯತಿಗೆ ಅನುದಾನ ಒದಗಿಸಲಾಗುತ್ತಿದೆ.

ಜಿಲ್ಲಾ ಪಂಚಾಯತಿಗೆ ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ಜಿಲ್ಲಾ ಪಂಚಾಯತ್‌ಗಳಲ್ಲಿ ಕ್ರಿಯಾ ಯೋಜನೆ ರೂಪಿಸಿ ರಸ್ತೆ ನಿರ್ವಹಣೆ/ಅಭಿವೃದ್ಧಿಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

ಪ್ರಸಕ್ತ ಸಾಲಿನಲ್ಲಿ ಗ್ರಾಮೀಣ ರಸ್ತೆಗಳ ನಿರ್ವಹಣೆ/ಅಭಿವೃದ್ಧಿಯನ್ನು ಕೆಳಕಂಡ ಯೋಜನೆಯಡಿ ಕೈಗೊಳ್ಳಲಾಗುತ್ತಿದೆ.

1. ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಲೆಕ್ಕಶೀರ್ಷಿಕೆ–3054
2. 13ನೇ ಹಣಕಾಸು ಆಯೋಗ ಯೋಜನೆ
3. ಗ್ರಾಮೀಣ ಸಂಪರ್ಕ ಯೋಜನೆ ಲೆಕ್ಕಶೀರ್ಷಿಕೆ–3054

4. ಯೋಜನೇತರ ಲೆಕ್ಕಶೀರ್ಷಿಕೆ–3054–ಜಿಲ್ಲಾ ಪಂಚಾಯತ್ ಕಾರ್ಯಕ್ರಮ ನಿರ್ವಹಣೆ
5. ನಬಾರ್ಡ್ ಯೋಜನೆ
6. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ
7. ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ

ವಸತಿಹೀನರಿಗೆ ವಸತಿ ಸೌಕರ್ಯ

284(245); ಶ್ರೀ ನಾರಾಯಣಸ್ವಾಮಿ ಎಸ್.ಎನ್. (ಬಂಗಾರಪೇಟೆ)

ಅ) ಕೋಲಾರ ಜಿಲ್ಲೆಯಲ್ಲಿ ಶೇ.30ರಷ್ಟು ಮಂದಿ ವಸತಿ ಹೀನರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) 2013–14 ಮತ್ತು 2014–15ನೇ ಸಾಲಿನಲ್ಲಿ ಬರಗಾಲ ಜಿಲ್ಲೆಯಲ್ಲಿ ವಸತಿ ಹೀನರಿಗೆ ಬಸವ ವಸತಿ/ಇಂದಿರಾ ಆವಾಜ್ ಯೋಜನೆಯಡಿಯಲ್ಲಿ ಪ್ರತಿ ಕ್ಷೇತ್ರಕ್ಕೆ ಮನೆಗಳನ್ನು ನೀಡಲಾಗಿದೆಯೇ (ಕ್ಷೇತ್ರವಾರು ವಿವರ ನೀಡುವುದು);

ಇ) 2013–14ನೇ ಸಾಲಿನವರೆಗೆ ಎಷ್ಟು ವಸತಿ ಯೋಜನೆಗಳು ಪೂರ್ಣಗೊಂಡಿದೆ; ಎಷ್ಟು ಅನುದಾನ ಖರ್ಚಾಗಿದೆ (ಕ್ಷೇತ್ರವಾರು ವಿವರ ನೀಡುವುದು);

ಈ) ಉಳಿಕೆ ವಸತಿ ಹೀನರಿಗೆ ವಿಶೇಷ ಜಿಲ್ಲೆಯೆಂದು ಪರಿಗಣಿಸಿ ಹೆಚ್ಚುವರಿ ಮನೆಗಳನ್ನು ನೀಡಲಾಗುವುದೇ?